ಆದರೆ ಅದರ ಛಂದಸ್ಸಿನ ಮೇಲೆ ಪ್ರಭುತ್ವ ಸಾಧಿಸದ ಅನನುಭವಿಗಳು ಮೆಟ್ಟಿಲುಗಳನ್ನು ಹತ್ತುತ್ತ ಮಹಡಿ ಏರುತ್ತಿರುವ ಜನರಂತೆ. ಕೇವಲ ಐದಾರು ಅಂತಸ್ತುಗಳನ್ನು ಏರುವಷ್ಟರಲ್ಲಿ ಅವರು ಸುಸ್ತಾಗಿ ಏದುಸಿರು ಬಿಡುತ್ತಾರೆ. ಅಂಥವರಿಗೇ ಈ ಛಂದಸ್ಸು ಕರವಸೂಲಿಗಾರನಂತೆ ಕಠಿಣವಾಗಿ ಕಾಣಿಸುವುದು, ಬಂಧನ ಎನಿಸುವುದು. ಇನ್ನು ಮುಕ್ತ ಛಂದಸ್ಸಿನ ಕಾವ್ಯದ ವಿಷಯಕ್ಕೆ ಬಂದರೆ ಅದೂ ಕೂಡ ತನ್ನ ಅಭಿವ್ಯಕ್ತಿಯಲ್ಲಿ ಅಂತರ್ಲಯವನ್ನು ಒಳಗೊಂಡಿದ್ದಾಗಲಷ್ಟೇ ಸಮೃದ್ಧವೆನಿಸುವುದು. ಈ ಲಯವೆಂಬುದು ಆ ಕವಿತೆಯ ಪದವಿನ್ಯಾಸವನ್ನು ಅಥವಾ ಅದರ ಶಾಬ್ದಿಕ ಮತ್ತು ವಸ್ತುಪರವಾದ ಸೂಕ್ಷ್ಮತೆಗಳನ್ನು ಅವಲಂಬಿಸಿರುತ್ತದೆ.

◆ **ಕಾವ್ಯಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ನೀವು ಈಗ ಕಥಾಸಂಕಲನಕ್ಕಾಗಿ ಸರಸ್ವತಿ ಸಮ್ಮಾನ್ ಪುರಸ್ಕಾರಕ್ಕೆ ಭಾಜನರಾಗಿದ್ದೀರಿ. ಪದ್ಯ–ಗದ್ಯಗಳ ಈ ಎರಡು ದೋಣಿಯ ಪಯಣದ ಅನುಭವದ ಬಗ್ಗೆ ಹೇಳಿ. ಇವೆರಡರಲ್ಲಿ ನಿಮಗೆ ಹೆಚ್ಚು ಆಪ್ತವೆನಿಸುವ ಪ್ರಕಾರ ಯಾವುದು ಮತ್ತು ಏಕೆ?**

ಒಬ್ಬ ಲೇಖಕನ ಮನಸ್ಸು ಹಲವಾರು ಅವಲೋಕನಗಳ ಮತ್ತು ಅನುಭವಗಳ ಭಂಡಾರ. ಒಬ್ಬ ಲೇಖಕ ತನ್ನೊಳಗಿನ ವಸ್ತುವೊಂದಕ್ಕೆ ಅಭಿವ್ಯಕ್ತಿಯ ರೂಪ ಕೊಡಲು ಬಯಸಿದಾಗ ಆ ವಸ್ತುವೇ ತನ್ನ ಪ್ರಕಾರವನ್ನು – ಅಂದರೆ ಗಜಲೋ, ಕವಿತೆಯೋ ಅಥವಾ ಗದ್ಯವೋ ಎಂಬುದನ್ನು – ನಿರ್ಧರಿಸಿಕೊಂಡು ಬರುತ್ತದೆ. ಹೌದು ನೀವು ಗುರುತಿಸಿದ್ದು ಸರಿಯಾಗಿದೆ. ನಾನು ಗಜಲ್ ಸಂಕಲನಕ್ಕಾಗಿ ಅಂದರೆ ಕಾವ್ಯಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದರೆ, ಕಥಾಸಂಕಲನಕ್ಕಾಗಿ ಸರಸ್ವತಿ ಸಮ್ಮಾನ್ ಪಡೆದಿದ್ದೇನೆ. ಆದರೆ ಹೀಗೆ ಗದ್ಯ–ಪದ್ಯಗಳಲ್ಲಿ ಬರೆಯುವುದನ್ನು ಎರಡು ದೋಣಿಯ ಪಯಣ ಎಂದು ನಾನೆಂದೂ ಭಾವಿಸಿಕೊಂಡಿಲ್ಲ. ನನ್ನ ಪಾಲಿಗೆ ಒಟ್ಟಾರೆ ಬರಹವೇ ಒಂದು ದೋಣಿಯಾನ. ಲೇಖಕನ ಮನಸ್ಸು ಒಮ್ಮೆ ಆ ಬದಿಯ ಗದ್ಯದ ಹುಟ್ಟು ಹಾಕಿದರೆ ಮತ್ತೊಮ್ಮೆ ಈ ಬದಿಯ ಪದ್ಯದ ಹುಟ್ಟು ಹಾಕುತ್ತದೆ. ಹೀಗೆ ಹುಟ್ಟು ಹಾಕುತ್ತಲೇ ದೋಣಿ ಮುಂದೆ ಸಾಗುತ್ತದೆ. ನನಗಂತೂ ಎರಡೂ ನನ್ನ ಪ್ರಕಾರಗಳೇ ಎನಿಸುತ್ತವೆ. ಹಾಗಾಗಿ ನಾನು ಈ ಎರಡು ಪ್ರಕಾರಗಳನ್ನೂ ಸಮಾನವಾಗಿ ಪ್ರೀತಿಸುತ್ತೇನೆ.

◆ **'ಒಬ್ಬ ಕವಿಯ ಕೈ ಇನ್ನೊಬ್ಬನ ಕಿಸೆಯಲ್ಲಿ' ಅಂತೊಂದು ಮಾತಿದೆ. ಆದರೆ ನೀವು ಮೇನಕಾ ಶಿವದಾಸಾನಿ ಅವರಿಗೆ ನೀಡಿದ ಸಂದರ್ಶನದಲ್ಲಿ 'ನಾನು ಯಾವ ಕವಿಯಿಂದಲೂ ಪ್ರಭಾವಕ್ಕೊಳಗಾಗಿಲ್ಲ' ಎಂದಿದ್ದೀರಿ. ಪ್ರಭಾವಗಳಿಲ್ಲದೆ ಇರಬಹುದು; ಪ್ರೇರಣೆಗಳು, ವಿಶೇಷವಾದ ಪ್ರೀತಿ–ಅಭಿಮಾನಗಳು ಇದ್ದೇ ಇರ್‍ತಾವಲ್ಲ. ಹಾಗೆ ನಿಮ್ಮನ್ನು ಬರೆಯಲು ಪ್ರೇರೇಪಿಸಿದಂಥ, ಬರೆದರೆ ಇವರಂತೆ ಬರೆಯಬೇಕು ಎಂದು ತೀವ್ರವಾಗಿ ಅನಿಸಿದಂಥ ಲೇಖಕರ ಬಗ್ಗೆ ಹೇಳಿ.**

ಈ ಪ್ರಶ್ನೆಯ ಚಾಣಾಕ್ಷತನಕ್ಕಾಗಿ ಮೆಚ್ಚಿದೆ. ಆದರೆ ಇದಂತೂ ಸತ್ಯ – ನಾನು ಯಾವ ಕವಿಯಿಂದಲೂ ಪ್ರಭಾವಕ್ಕೊಳಗಾಗಿಲ್ಲ, ಯಾರಿಂದಲೂ ಪ್ರೇರಣೆ ಪಡೆದಿಲ್ಲ. ನನ್ನ ದಾರಿ ಯಾರೂ ತುಳಿಯದ್ದು ಏಕೆಂದರೆ ಇದನ್ನು ಕಡೆದದ್ದೇ ನಾನು. ಹಾಗಾಗಿ ನನ್ನ ಶೈಲಿ ನನ್ನದೇ. ಅದೇನೇ ಇರಲಿ, ನಾನು ಕೆಲವು ಕವಿಗಳನ್ನು ಮತ್ತು ಲೇಖಕರನ್ನು ತುಂಬಾ ಪ್ರೀತಿಸ್ತೀನಿ. ಅದ್ಭುತ ಸೌಂದರ್ಯಪ್ರಜ್ಞೆಯ ಸಿಂಧಿ ಕವಿ ನಾರಾಯಣ ಶ್ಯಾಮ್ (1922–1989) ಅವರ ಬಗ್ಗೆ ನನಗೆ ಅಪಾರವಾದ ಗೌರವ. ನನ್ನ ದೃಷ್ಟಿಯಲ್ಲಿ ಅವರ ಸೌಂದರ್ಯಸೃಷ್ಟಿಗಳು ಜಾಗತಿಕ ಮಟ್ಟದವು. ನಾನು ಅತ್ಯಂತ ಹೆಚ್ಚು ಪ್ರೀತಿಸುವ